ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.860/2016

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಬಸನಗೌಡ** | | |
| **ತಂದೆ:ಹೆಸರು** | **ಬರಮರೆಡ್ಡಿ** | **ಪಿಡಬ್ಲೂ:** | **6** |
| **ವಯಸ್ಸು** | **50 ವರ್ಷ** | **ಸಿಡಬ್ಲೂ:** | **8** |
| **ಉದ್ಯೋಗ:** | **ಜೆ. ಇ.** | | |
| **ವಾಸ ಸ್ಥಳ:** | **ಸಿಂಧನೂರು.** | | |

**ದಿನಾಂಕ 26-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ::**

ಚಾಸಾ-1, 4 ರಿಂದ 7 ರವರ ಪರಿಚಯ ಇದೆ. ಆರೋಪಿಯ ಪರಿಚಯ ಇದೆ. ಜಗಳ ಆಗಿದ್ದ ಬಗ್ಗೆ ಗೊತ್ತು, ಆದರೆ ಪೋಲೀಸರು ಸಹಿ ಮಾಡು ಎಂದರು ಸಹಿ ಮಾಡಿದ್ದೆ. ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿಲ್ಲ, ನನಗೆ ಏನೂ ಗೊತ್ತಿಲ್ಲ.

ಸಾಕ್ಷಿಗೆ ಮು. ಮಾ. ಗಳನ್ನು ತೋರಿಸಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು:: ಮಾನ್ಯ ಸ.ಸ.ಅ. ರವರಿಂದ::**

ದಿ.26-03-2014 ರಂದು ನಾನು ಕೆಲಸದ ನಿಮಿತ್ತ ಸಿಂಧನೂರಿನ ಜೆಸ್ಕಾಂ ಪಾಲನೆ ವಿಭಾಗದ ಕಾರ್ಯಾಲಯಕ್ಕೆ ಸಂ.4-45 ಕ್ಕೆ ಹೋದಾಗ, ಚಾಸಾ-1 ರವರು ತಮ್ಮ ಕಛೇರಿ ಛೇಂಬರ್ ನಲ್ಲಿ

ಕುಳಿತುಕೊಂಡಿದ್ದಾಗ ಜೋರಾಗಿ ಯಾಕೆ ಟ್ರಾನ್ಸ್‌ಫರ್ ಮಾಡಿಸಿದ್ದೀಯಲೇ ಮಗನೆ ಎಂದು ಆರೋಪಿತನು, ನೀನು ಹೆಂಗೆ ಕೆಲಸ ಮಾಡುತ್ತೀ ನೋಡಿಕೊಳ್ಳುತ್ತೀನಲೇ ಎಂದು ಅವಾಚ್ಯವಾಗಿ ಬೈದನು ಎಂದರೆ ಸರಿಯಲ್ಲ. ಆಗ ನಾನು, ಶೇಖರ್ ಕಿ.೯೦., ಚಾಸಾ-4 ರಿಂದ 7 ಹಾಗೂ ಹೋಗಿ ನೋಡಲಾಗಿ, ಆರೋಪಿತನು ತನ್ನ ಕಾಲಿನ ಚಪ್ಪಲಿಯನ್ನು ಕೈಗೆ ತೆಗೆದುಕೊಂಡು ಚಾಸಾ-1 ರವರ ತಲೆಗೆ ಹೊಡೆದನು ಎಂದರೆ ಸರಿಯಲ್ಲ. ಆಗ ಅವರು ತಮ್ಮ ಎಡಗೈಯನ್ನು ಅಡ್ಡ ತಂದಾಗ ಅವರನ್ನು ಕುರ್ಚಿ ಮೇಲಿಂದ ಎಳೆದು, ಎಡಗೈಯಿಂದ ಹೊಡೆದನು ಎಂದರೆ ಸರಿಯಲ್ಲ. ಆಗ ಚಾಸಾ-1 ರವರ ಕೈಯಲ್ಲಿದ್ದ ವಾಚ್ ಕಟ್ಟಾಗಿ ಬಿದ್ದಿತ್ತು, ಆ ಮೆಟಲ್ ವಾಚಿನಿಂದ ಆರೋಪಿಯು ಚಾಸಾ-1 ರವರ ತಲೆಗೆ ಹೊಡೆದು ಗಾಯಪಡಿಸಿ, ಅವಾಚ್ಯವಾಗಿ ಬೈದು, ಅಟ್ರಾಸಿಟಿ ಕೇಸ್ ಮಾಡಿಸುವುದಾಗಿ ಹೆದರಿಸಿ, ಚಪ್ಪಲಿ & ಕೈಗಳಿಂದ ಹೊಡಿಬಡಿ ಮಾಡಿ ಜೀವದ ಬೆದರಿಕೆ ಹಾಕಿದ್ದನು ಎಂದರೆ ಸರಿಯಲ್ಲ. ಆರೋಪಿ ಮಾಡಿದ ಹಲ್ಲೆಯಿಂದ ಚಾಸಾ-1 ರವರಿಗೆ ರಕ್ತಗಾಯವಾಗಿ, ಅವರ ಬಟ್ಟೆ & ಮೈಕೈಗೆ ರಕ್ತದ ಕಲೆ ಆಗಿತ್ತು ಎಂದರೆ ಸರಿಯಲ್ಲ. ನೀವು ಮು.ಮಾ. ಗಳನ್ನು ನೋಡಿದ್ದರೂ ನೋಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಸದರಿ ವಿಚಾರವಾಗಿ ನಾನು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದಿರುವುದರಿಂದ, ಸಾಕ್ಷಿಯು ಪೋಲೀಸರಿಗೆ ನೀಡಿದ ಹೇಳಿಕೆಯನ್ನು ನಿಪಿ-4 ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲ.</u>

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**